© 2018 IJNRD | Volume 3, Issue 10 October 2018| ISSN: 2456-4184 | IJNRD.ORG

# ಕನ್ನಡ ಸಾಹಿತ್ಯದಲ್ಲಿ ಗ್ರಾಮೀಣ ಬದುಕು

**ಡಾ.ಲಕ್ಷ್ಮೀನಾರಾಯಣ ಎ.ವಿ**
**ಸಹ ಪ್ರಾಧ್ಯಾಪಕರು**
**ಸ.ಪ್ರ.ದ.ಕಾ ಕೆಂಗೇರಿ**
**Corresponding Author:lakshminarayan2453@gmail.com**

ಭಾರತ ಗ್ರಾಮೀಣ ಸಂವೇದನೆಗಳನ್ನು ಮೈಗೂಡಿಸಿಕೊಂಡ ದೇಶ. ಈ ದೇಶದಲ್ಲಿರುವ ಜನರಿಗೆ ಒಂದಲ್ಲ ಒಂದು ರೀತಿಯ ಆಕರ್ಷಣೆ, ಆತ್ಮೀಯತೆ, ಪ್ರಭಾವ ಇಲ್ಲದೇ ಇಲ್ಲ. ಆದಿಕವಿ ಪಂಪನಿಂದ ಹಿಡಿದು ಇಂದಿನ ಕವಿಗಳವರೆಗೂ ಹಳ್ಳಿ ಎಂಬುದು ಸೆಳೆತದ ಬಿಂದು. ಆದಿಕವಿ ಪಂಪನು ಅತ್ಯಂತ ಪ್ರೀತಿಯಿಂದ ಕನ್ನಡ ನಾಡನ್ನು ಬಣ್ಣಿಸಿರುವುದನ್ನು 'ವಿಕ್ರಮಾರ್ಜುನ ವಿಜಯ'ದಲ್ಲಿ ಕಾಣುತ್ತೇವೆ. ಅರ್ಜುನನು ದಕ್ಷಿಣ ಭಾರತದ ಮೇಲೆ ದಿಗ್ವಿಜಯಕ್ಕೆ ಬಂದಾಗ ಪಂಪ ಅವನ ಮೂಲಕ ಬನವಾಸಿಯ ಮೇಲಿನ ತನ್ನ ಒಲುಮೆಯನ್ನು ಹೀಗೆ ಹೇಳಿಕೊಂಡಿದ್ದಾನೆ.

**"ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ**

**ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ**

**ನಾಗಿಯುಮೇನೊ ತೀರ್ದಪುದೆ ತೀರದೊಡಂಮಱಿ ದುಂಬಿಯಾಗಿ ಮೇಣ್**

**ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್"**[1]

ಬನವಾಸಿಯು ಪಂಪನ ಪ್ರೀತಿಯ ಪ್ರದೇಶ. ಆದುದರಿಂದ ತನ್ನ ಬಾಲ್ಯದ ಸಾರವತ್ತಾದ ಬಹುಭಾಗ ಕಾಲ ಅಲ್ಲಿಯೇ ಕಳೆದಿದ್ದನು. ಆದುದರಿಂದ ಆ ಪ್ರದೇಶದಲ್ಲಿ ಮಾನವನಾಗಿ ಜನ್ಮ ತಳೆಯುವ ಭಾಗ್ಯವಿಲ್ಲದಿದ್ದರೆ ಒಂದು ಮರಿದುಂಬಿಯಾಗಿ ಅಥವಾ ಕೋಗಿಲೆಯಾಗಿಯಾದರೂ ಹುಟ್ಟಬೇಕು ಎಂಬ ಹಂಬಲ. ಒಟ್ಟಾರೆ ತಾನು ಬೆಳೆದ ಆ ನೆಲದ ಸಂವೇದನೆ ಪಂಪನಲ್ಲಿ ಹೀಗೆ ಬಂದಿದೆ. ಹಾಗೆಯೇ ಕುವೆಂಪು ಅವರಿಗೆ ತಮ್ಮ ಬಾಲ್ಯದ ದಿನಗಳನ್ನು ಕಳೆದ ಮಲೆನಾಡಿನ ಬಗ್ಗೆ ಅಪರಿಮಿತವಾದ ಪ್ರೀತಿ. ಅವರು ಎಲ್ಲೆ ಇರಲಿ ಅವರ ಮನಸ್ಸು ಮಾತ್ರ ಮಲೆನಾಡಿನ ಕಡೆಗೆ ಸೆಳೆಯುತ್ತಿರುವುದನ್ನು ಈ ಕೆಳಗಿನ ಪದ್ಯದಲ್ಲಿ ಕಾಣಬಹುದು.

**"ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ;**

**ಮಲೆಯ ನಾಡಿಗೆ, ಮಳೆಯ ಬೀಡಿಗೆ, ಸಿರಿಯ ಚೆಲುವಿನ ರೂಢಿಗೆ**

**ಬೇಸರಾಗಿದೆ ಬಯಲು, ಹೋಗುವೆ ಮಲೆಯ ಕಣಿವೆಯ ಕಾಡಿಗೆ**

**ಹಸಿರು ಸೊಂಪಿನ ಬಿಸಿಲ ತಂಪಿನ ಗಾನದಿಂಪಿನ ಗೂಡಿಗೆ"**[2]

ಬಯಲು ಸೀಮೆಯ ಬೋಳು ಬಯಲಿನ ವಾತಾವರಣ ಕಂಡು ಕಂಡು ಬೇಸರಗೊಂಡ ಕವಿಯು ತನ್ನ ಭವ್ಯವಾದ ವ್ಯಕ್ತಿತ್ವವನ್ನು ರೂಪಿಸಿದ, ಸೃಷ್ಟಿಸಿದ ಮಲೆನಾಡಿಗೆ ಹೊರಡುವ ಸಮಯ ಬಂದ ಕೂಡಲೇ ಉತ್ಸಾಹದಿಂದ "ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ" ಎಂಬ ಉತ್ಕಟವಾದ ಹಂಬಲವನ್ನಿಟ್ಟು ಕೊಂಡಿರುವುದನ್ನು ಕಾಣುತ್ತೇವೆ.

ಕುವೆಂಪು ಅವರಿಗೆ ಮಲೆನಾಡಿನ ಒಂದೊಂದು ಪಕ್ಷಿ, ಒಂದೊಂದು ಎಲೆ, ಗಿಡ ಮರಗಳು ಸುಪರಿಚಿತ. ಒಟ್ಟಾರೆ ಅವರ ಮನಸ್ಸು ಸೌಂದಾರ್ಯಾನುಭೂತಿಯಲ್ಲಿ ಮುಳುಗಿರುವುದನ್ನು ಕಾಣಬಹುದು.

ಪಂಪ ಮತ್ತು ಕುವೆಂಪು ಅವರು ತಾವು ಹುಟ್ಟಿ ಬೆಳೆದ ಸ್ಥಳದ ಬಗ್ಗೆ ಹೊಂದಿದ್ದ ಸಂವೇದನೆ ಅವರ ಸಾಹಿತ್ಯದ ಹಲವು ಕಡೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಅನಾವರಣಗೊಂಡಿದೆ. ಹಾಗೆಯೇ ಬರಗೂರರು "ಬರಗೂರಿನಿಂದ ಬೆಂಗಳೂರಿಗೆ ಬಂದರೂ "ಬರಗೂರು" ಎಂಬ ಹಳ್ಳಿಯ ಸಂವೇದನೆ ಅವರಲ್ಲಿ, ಅವರ ಸಾಹಿತ್ಯದಲ್ಲಿ ಹೇಗೆ ಅಭಿವ್ಯಕ್ತ ಪಡೆದುಕೊಂಡಿದೆ ಎಂಬುದನ್ನು ಕೆಳಗಿನ ಪದ್ಯದಿಂದ ತಿಳಿಯಬಹುದಾಗಿದೆ.

**"ಬುಸುಗುಡುವ ಬೆವರಲ್ಲಿ ಬಿಸಿಲ ಕುಡಿದು**
**ಕಣ್ಣುಗಳಲ್ಲಿ ಬಣ್ಣದ ಚಿತ್ತಾರ ಬಿಡಿಸಿದ್ದು**
**ಬಸ್ಸಿಗೆ ಕಾಸಿಲ್ಲದೆ ಕಾಲಲ್ಲೆ ಕಾವ್ಯ ಬರೆದದ್ದು**
**ಹಸಿದ ಹೊಟ್ಟೆಯ ಒಳಗೆ ಕನಸುಗಳು ಕಟ್ಟಿದ್ದು–**
**ಕತ್ತಲೆಯ ಕಟ್ಟುಗಳನ್ನು ಬಿಚ್ಚಿಕೊಳ್ಳುತ್ತದೆ**
**ಬುದ್ಧ ಬೆಳಕಿನ ಬುತ್ತಿ;**
**ಕಾವ್ಯ ತುಂಬಿಕೊಳ್ಳಬೇಕು ಕಾಂಟೆಸಾದ ಒಳಗೆ**
**ನೆನಪಾಗುತ್ತಲೇ ಇರಬೇಕು ಬರಿಗಾಲ ನಡಿಗೆ"**[3]

ಹೀಗೆ ಬರಗೂರರಿಗೆ ಬರಿಗಾಲ ನಡಿಗೆ ಸದಾ ನೆನಪಾಗುತ್ತಲೇ ಇರುತ್ತದೆ. ಬರಗೂರರ ಸಾಹಿತ್ಯ ಲೋಕದಲ್ಲಿ ಬೆವರು ಒಂದು ಶಾಶ್ವತ ರೂಪಕ. ಬೆವರು ದುಡಿಮೆಯ ಸಂಕೇತ; ಅದರ ಆಯಾಮಗಳು ಅನೇಕ. ಸ್ವಾತಂತ್ರ ಗಳಿಸಿದ ಸನ್ನಿವೇಶದಲ್ಲಿ ಎಲ್ಲರಿಗೂ ಸಮಾನವಾದ ಅವಕಾಶಗಳು ಎಂಬ ಭರವಸೆ ಕಾಣಿಸಿಕೊಂಡಿದ್ದುಂಟು; ಆದರೆ ಕಾಲ ಕಳೆದಂತೆ ಕೇವಲ ಕೆಲವರಿಗೆ ಮಾತ್ರ ಉತ್ತಮ ಉಪಚಾರ ಎಂಬ ಸಂಗತಿ ಜನಜನಿತವಾಯಿತು. ಬೆವರು ಬಸಿಯುವವರು ಬಸಿಯುತ್ತಲೇ ಇದ್ದಾರೆ. ಸುಖವಾಗಿರುವವರು ಸುಖವಾಗಿಯೇ ಇದ್ದಾರೆ ಎಂಬುದು ಗಮನೀಯ.

**"ಕೈಯಿದ್ದರೂ ಕೂಳಿಲ್ಲ ಮೈಯಿದ್ದರೂ ಮನೆಯಿಲ್ಲ**
**ನೆಲದ ನೆಂಟರು ನಾವು ಬೆವರಿನ ಜನರು**
**ತವರಿನ ಜನರು"**[4]

ತಾವು ಬೆಳೆದ ಗ್ರಾಮೀಣ ಪರಿಸರದ ಎಲ್ಲಾ ನೆಲೆಗಳನ್ನು ಗುರುತಿಸುವ, ದಾಖಲಿಸುವ ತುಡಿತವನ್ನು ಬರಗೂರರಲ್ಲಿ ಕಾಣುತ್ತೇವೆ. "ಬೆವರು ಮನುಷ್ಯ ಸಮಾಜದ ಮೂಲ; ಕತ್ತಲಿಂದ ಬೆಳಕಿಗೆ ಕತ್ತಲಿಗೆ ಸೇತುವೆ ಕಟ್ಟುತ್ತಾ ಬಂದ "ಬೆವರು" ನಮ್ಮ ನಡುವಿನ ಒಂದು ಚಾರಿತ್ರಿಕ ಪ್ರಕ್ರಿಯೆ. ಹಗಲಿರುಳೆನ್ನದೆ ನಿರಂತರ ಕ್ರಿಯಾಶೀಲತೆಯಲ್ಲಿ ಮಗ್ನವಾದ ಈ ಬೆವರು ಬೆಟ್ಟ ಗುಡ್ಡಗಳಲ್ಲಿ ಬದುಕನ್ನು ಹುಡುಕಿದೆ. ತನ್ನ ತೊಡಗುವಿಕೆಯ ಮೂಲಕ ಬುದ್ಧಿ ಭಾವಗಳನ್ನು ಒಳಗೊಳ್ಳುತ್ತಾ ಸೃಜನಶೀಲ ನೆಲೆಗಳನ್ನು ನಿರ್ಮಾಣ ಮಾಡುತ್ತಾ ಬಂದಿದೆ. ಒಟ್ಟಾರೆ ಇದೊಂದು ಮನುಷ್ಯ ಚರಿತ್ರೆ ಎಂದೂ ಬತ್ತದ ಅಕ್ಷಯ ಪಾತ್ರೆ, ಇದೇ ನನ್ನ ಭೂಮಿ ತತ್ವ"[5] ಈ ಮಾತುಗಳಲ್ಲಿ ಬರಗೂರರಿಗೂ 'ಬೆವರಿಗೂ' ಮತ್ತು ಬರಗೂರರಿಗೂ ಗ್ರಾಮೀಣ ಬದುಕಿಗೂ

ನಂಟಿರುವುದು ಎಲ್ಲರಿಗೂ ಗೋಚರಿಸುವ ವಿಷಯ. ಬರಗೂರರು ತಮ್ಮ ಸಾಹಿತ್ಯದಲ್ಲಾಗಲೀ, ಸಿನಿಮಾಗಳಲ್ಲಾಗಲೀ ಗ್ರಾಮೀಣ ಬದುಕಿನ ಚಿತ್ರಣವನ್ನು ವಾಸ್ತವದ ನೆಲೆಯಲ್ಲಿ ತರುತ್ತಾರೆ. ಇದು ಅವರ ನೈಜವಾದ ಸಂವೇದನೆ.

ಪಂಪ ನೋಡುವ ನಿಸರ್ಗ ಚಿತ್ರಣವಾಗಲಿ, ಕುವೆಂಪು ಅವರ ಸಮೃದ್ಧವಾದ ಮಲೆನಾಡಿನ ಸೌಂದಾರ್ಯಾನುಭವವಾಗಲಿ, ಎಲ್ಲಾ ಕಾಲಕ್ಕೂ, ಎಲ್ಲರಿಗೂ ಇಷ್ಟವಾಗುತ್ತವೆ. ಏಕೆಂದರೆ ಅಲ್ಲಿ ಅಂತಹ ಆಹ್ಲಾದಕರವಾದ ಹಕ್ಕಿಯ ಹಾಡು, ಹಸಿರಿನ ಕಾಡು, ಸೌಂದರ್ಯ ಸೂಸುವ ಬೆಟ್ಟ ಗುಡ್ಡಗಳು, ಗಂಧದ ಸುಗಂಧ, ಹರಿಯುವ ನದಿಗಳು, ಅರಳಿರುವ ಹೂಗಳು, ಫಲ-ಪುಷ್ಪಗಳಿಂದ ಕೂಡಿದ ಮರಗಳು- ಹೀಗೆ ಅಲ್ಲಿನ ನಿಸರ್ಗ ಸಂಪತ್ತು ಆಹ್ಲಾದಕರವಾದ ವಾತಾವರಣವನ್ನು ಉಂಟು ಮಾಡುತ್ತದೆ. ಇದರಿಂದ ಇಂತಹ ನಿಸರ್ಗ ಪಂಪನಂತವರಿಗೆ, ಕುವೆಂಪು ಅಂತಹವರಿಗೆ ಸಾಹಿತ್ಯ ರಚಿಸಲು ಪ್ರೇರಣೆಯಾಯಿತು. ಆದರೆ ಬರಗೂರರಿಗೆ ಅವರ ಹುಟ್ಟೂರು ಹೇಗೆ ಪ್ರೇರಣೆಯಾಯಿತು. "ಭೂತದಲ್ಲಿ ಹೂತು ಹೋಗುವ ಮನಸ್ಸುಗಳು ವರ್ತಮಾನ ಮತ್ತು ಭವಿಷ್ಯದ ಒತ್ತಾಸೆಯಾಗುವ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಗತ ವೈಭವದ ಮಂತ್ರ ಪಠಣದಲ್ಲಿ ಮಗ್ನವಾಗುತ್ತವೆ. ಇಂಥ ಮನಃಸ್ಥಿತಿಯಿಂದ ಸ್ಥಿತ್ಯಂತರಗೊಳ್ಳಲು ನನ್ನೂರ ಅನುಭವವೇ ಒತ್ತಾಸೆಯಾಯಿತು. ಗತ ವೈಭವದ ಮೆಲುಕುವಿಕೆಯಲ್ಲಿ ಮೈಮರೆಯದಂತೆ ನನ್ನೂರಿನ ಕಾಗೆ ಕೂಗುತ್ತದೆ; ಕೂಳೆ ಹೊಲ ಕಾಲಿಗೆ ಚುಚ್ಚುತ್ತದೆ; ಜಾಲಿಯ ಮರ ಜೀವನ ದರ್ಶನವಾಗುತ್ತದೆ,"[6]

"ಪ್ರತಿಯೊಬ್ಬ ಮನುಷ್ಯನಿಗೂ ಬಾಲ್ಯವೆಂಬುದೊಂದು ಬದುಕಿನುದ್ದಕ್ಕೂ ಬೆನ್ನು ಹತ್ತಿ ಬರುವ ಅದ್ಭುತ ಲೋಕದ ಗರಡಿ ಗಮ್ಮತ್ತಿನ ಡಬ್ಬಿ. ವಿವೇಕವೆಂಬ ಡಬ್ಬಿಯ ಮಾಲೀಕ ತನ್ನ ಸೃಜನಶೀಲತೆಯ ಬಲದಿಂದ ಯಾವ ಜಾತ್ರೆಯಲ್ಲಾದರೂ ಚಿತ್ರಗಳನ್ನು ತೆರೆ ತೆರೆದು ತೋರಿಸುತ್ತಾ ಪ್ರೇಕ್ಷಕರು ಮತ್ತು ಮಾಲೀಕ ಎಂಬ ಅಂತರವಿಲ್ಲದ ಹಾಗೇ ಸಂತೋಷದ ಸಂವಾದ ನಡೆಸಬಲ್ಲ. ಅಂತಹ ವಿವೇಕದಿಂದ ಬಾಲ್ಯದ ಡಬ್ಬಿಯಲ್ಲಿಯ ತನ್ನೂರಿನ ಹಕೀಕತ್ತನ್ನು ಕಥೆಯಾಗಿಸುವುದರ ಹಿಂದಿರುವ ಮನುಷ್ಯ ಪ್ರೀತಿ ಮತ್ತು ಬಂಡಾಯದ ಗುಣದಿಂದ ಬರಗೂರು ಅವರ ಕಥೆಗಳು ಇಡೀ ಇಂಡಿಯಾದ ಚರಿತ್ರೆಯನ್ನು ಬಿಚ್ಚಲು ಸಹಾಯ ಮಾಡುತ್ತವೆ" ಎಂಬ ಮಲ್ಲಿಕಾ ಘಂಟಿಯವರ ಮಾತುಗಳು ಬರಗೂರರ ಬಾಲ್ಯವನ್ನು ಕಟ್ಟಿ ಕೊಡುತ್ತವೆ.

ಗ್ರಾಮೀಣ ಬದುಕು ಎಂದ ಕೂಡಲೆ 'ಗ್ರಾಮ್ಯ' ಬದುಕಿನ ಹಳೆ ಸಂಪ್ರದಾಯಗಳನ್ನು ಹಬ್ಬ ಹರಿದಿನಗಳನ್ನು ಕಾಣುತ್ತೇವೆ. ಜೊತೆಗೆ ಅಲ್ಲಿನ ಆಚಾರ, ವಿಚಾರ, ನಡೆ, ನುಡಿ, ಆಹಾರ, ವಿಹಾರ, ಮುಂತಾದ ಸಾಂಸ್ಕೃತಿಕ ಬದುಕಿನ ಹಲವು ಪದರಗಳನ್ನು ವೈಭವೀಕರಿಸಿ ಕಟ್ಟಿ ಕೊಡುವುದು ಸಾಮಾನ್ಯ. ಆದರೆ ಬರಗೂರರ ಸಾಹಿತ್ಯ ಮತ್ತು ಸಿನಿಮಾಗಳಲ್ಲಿ ಹಳೆ ಸಂಪ್ರದಾಯಗಳ ವೈಭವೀಕರಣ ಕಂಡುಬರುವುದಿಲ್ಲ. ಬಂದಿದ್ದರೂ ಸಂದರ್ಭಕ್ಕೆ ಅನುಗುಣವಾಗಿ, ನಿಮಿತ್ತವಾಗಿ ಬಂದಿರುವುದನ್ನು ಗುರುತಿಸಬಹುದು. ಗ್ರಾಮ್ಯ ಸಂವೇದನೆಯ ಬಗೆಗೆ ಬರಗೂರರು "ನಮ್ಮ ಹಳ್ಳಿಗಳು ಸಾಹಿತ್ಯದಲ್ಲಿ ಕಾಣಿಸಿಕೊಂಡ ಕ್ರಮ ಒಂದೇ ರೀತಿಯದ್ದಲ್ಲ. ಹಳ್ಳಿಗಳನ್ನು ಅಲ್ಲಿಯ ಬದುಕಿನ ರೀತಿಗಾಗಿ ಸಂಸ್ಕೃತಿಯ ವಿನ್ಯಾಸಗಳಿಗಾಗಿ, ವೈಭವೀಕರಿಸಿದ ಕ್ರಮ ಒಂದು ಕಡೆಯಾದರೆ, ಹಳ್ಳಿಯನ್ನು ಮ್ಯೂಜಿಯಂನ ವಿಶಿಷ್ಟ ವಸ್ತುವಿನಂತೆ ಗ್ರಹಿಸುವ ಕ್ರಮ ಇನ್ನೊಂದು ಕಡೆಗಿದೆ. ನಾನು ಈ ಎರಡೂ ನೆಲೆಗಳಿಂದಲೂ ಹಳ್ಳಿಯನ್ನು ಗ್ರಹಿಸಿಲ್ಲ. ಊಳಿಗಮಾನ್ಯ ಸಂಸ್ಕೃತಿಯ ಬೇರುಗಳು ಬಲವಾಗಿರುವಾಗಲೇ ಬಂದಿರುವ ಪ್ರಜಾಸತ್ತಾತ್ಮಕ ಸಂಸ್ಕೃತಿಯ ಸಂಕಟಗಳು ನನ್ನ ಕಣ್ಣೆದುರಿವೆ. ಈ ಸನ್ನಿವೇಶದಲ್ಲಿ ಹುಟ್ಟಿರುವ ವೈರುಧ್ಯಗಳು ನನ್ನನ್ನು ಕಾಡುತ್ತಾ ಬಂದಿವೆ. ನಮ್ಮ ಹಳ್ಳಿ ಈಗ ನಿಂತ ನೀರಾಗಿಲ್ಲ. ಬದಲಾಗುತ್ತಿರುವ ನೆಲೆಗಳಾಗಿವೆ. ಏಕಮುಖ ನೆಲೆಗಳಿಂದ ಬಹು ಮುಖಾಮುಖಿಗೆ ಒಳಗಾಗುತ್ತಿವೆ. ಇಂತಹ ಸನ್ನಿವೇಶದಲ್ಲಿ ಹಳ್ಳಿಯು ಕೇವಲ ಸಾಂಸ್ಕೃತಿಕ ಮ್ಯೂಸಿಯಂ ಆಗಿ ಸಾಹಿತ್ಯದಲ್ಲಿ

ಅಭಿವ್ಯಕ್ತಿಗೊಳ್ಳುವುದು ನನ್ನ ಮಟ್ಟಿಗೆ ಅಪ್ಯಾಯಮಾನ ಸಂಗತಿಯಲ್ಲ. ಅಂತೆಯೇ ವೈಭವೀಕರಣವು ವಾಸ್ತವಕ್ಕೆ ಹತ್ತಿರವಾದುದಲ್ಲ. ಸ್ವಾತಂತ್ರೋತ್ತರ ಭಾರತದಲ್ಲಿ ಗಾಢವಾಗುತ್ತಿರುವ ಸಂಘರ್ಷ ಮತ್ತು ಸಾಮರಸ್ಯದ ಒಳಸುಳಿ ವಿಶಿಷ್ಟವಾದುದು"[7] ಎಂಬ ನಿಲುವನ್ನು ತಾಳುತ್ತಾರೆ. ಹೀಗಾಗಿ ಬರಗೂರರ ಸಾಹಿತ್ಯ ಮತ್ತು ಸಿನಿಮಾ ಚಿತ್ರಣಗಳಲ್ಲಿ ಬದಲಾಗುತ್ತಿರುವ ಗ್ರಾಮೀಣ ಬದುಕಿನ ಪರಿಸರವನ್ನು ಕಾಣುತ್ತೇವೆಯೇ ಹೊರತು, ಯುಗಾದಿ ಹಬ್ಬದ ಸಂಭ್ರಮ–ಸಡಗರಗಳನ್ನು ಕಾಣುವುದು ಸಾಧ್ಯವಿಲ್ಲ. ಬದಲಾಗುತ್ತಿರುವ ಸಂದರ್ಭದಲ್ಲಿ ಗ್ರಾಮೀಣ ಪರಿಸರದ ತಳಮಳಗಳನ್ನು, ಸಂವೇದನೆಗಳನ್ನು, ಸಂಘರ್ಷಗಳನ್ನು ಜೀವನಕ್ಕೆ ಹತ್ತಿರವಾದ ನೆಲೆಯಲ್ಲಿ ಬರಗೂರರು ಕಟ್ಟಿ ಕೊಡುತ್ತಾರೆ.

ಬರಗೂರರದು ಅಪ್ಪಟ ಗ್ರಾಮ್ಯ ಸಂವೇದನೆ. ಅವರ ಸಾಹಿತ್ಯ ಮತ್ತು ಸಿನಿಮಾದ ಯಾವ ಸಂದರ್ಭದಲ್ಲಿಯೂ ಗ್ರಾಮೀಣ ಪರಿಸರದ ದಟ್ಟ ಚಿತ್ರಣದ ವಿವರಗಳು ನಮಗೆ ಕಾಣಸಿಗುತ್ತವೆ. "ಹುಟ್ಟೂರಿನ ಮೂಲಕ ದೇಶವನ್ನು, ದೇಶದ ಮೂಲಕ ಹುಟ್ಟೂರನ್ನು ನೋಡುವುದು ಸಾಧ್ಯವಾದಾಗ ನಮ್ಮ ಮನಸ್ಸು ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುತ್ತದೆ. ಇಲ್ಲದಿದ್ದರೆ ಸ್ವಾಸ್ಥ್ಯದ ಜಾಗವನ್ನು ಸ್ವಾರ್ಥ ಆವರಿಸಿ ದೇಶ–ಊರು ಎಲ್ಲವನ್ನೂ ಅನಾರೋಗ್ಯದ ನೆಲೆಗೆ ತಂದು ನಿಲ್ಲಿಸಿ ನೋಡ ತೊಡಗುತ್ತದೆ. ನನಗೆ ನನ್ನೂರು ಎನ್ನುವುದು ಯಾವತ್ತೂ ಸೆಳೆತದ ಕೇಂದ್ರ. ದೇಶ–ಕೋಶಾದಿಗಳನ್ನು ಪೂರ್ತಿ ನೋಡದ ಒಂದು ವಯಸ್ಸಿನಲ್ಲಿ ನಮಗೆಲ್ಲ ಹುಟ್ಟೂರೇ ವಾಸ್ತವ; ಉಳಿದದ್ದು ಕನಸು; ಕೆಲವೊಮ್ಮೆ ವಾಸ್ತವದ ಹುಟ್ಟೂರಿನಲ್ಲಿ ಕಟ್ಟುವ ಕನಸುಗಳು ಭ್ರಮೆಯಾಗದಂತೆ ನೋಡಿಕೊಳ್ಳುವ ಹೊಣೆ ಮತ್ತು ಹೋರಾಟವೇ ನಮ್ಮಂಥವರ ಬದುಕು."[8] ಎಂದು ಹೇಳುವ ಬರಗೂರರು ತಾವು ಹುಟ್ಟಿದ ಊರಿನ ಹಿನ್ನೆಲೆಯಲ್ಲಿ ಹಾಗೂ ಅವರ ಬಾಲ್ಯದ ದಿನಗಳಲ್ಲಿ ಕಂಡುಂಡ ಘಟನೆಗಳ ಭಾವನಾತ್ಮಕತೆಯನ್ನು ಸಾಂದರ್ಭಿಕವಾದ ನೆಲೆಯಲ್ಲಿ ಕಟ್ಟಿ ಕೊಡುತ್ತಾ, "ನನ್ನೊಂದಿಗೆ ನನ್ನೂರು ಇರಲೇಬೇಕು. ಇದರ ಮೂಲಕ ನನ್ನ ತಾಲ್ಲೂಕನ್ನು, ಜಿಲ್ಲೆಯನ್ನು, ರಾಜ್ಯ ದೇಶಾದಿಗಳನ್ನು ನೋಡಬೇಕು. ಈಗ ನನಗೊಂದು ಸಂತೋಷ ನನ್ನನ್ನು ರಾಮಚಂದ್ರಪ್ಪ ಎನ್ನುವುದಕ್ಕಿಂತ "ಬರಗೂರ್" ಎಂದೇ ಗುರುತಿಸುತ್ತಾರೆ."[9] ಎಂದು ಹೇಳುವ ಬರಗೂರರಲ್ಲಿ ತನ್ನ ಊರಿನ ಬಗ್ಗೆ ಅತಿಶಯವಾದ ಪ್ರೀತಿ, ಅಭಿಮಾನ ಮತ್ತು ಹೆಗ್ಗಳಿಕೆ ಇರುವುದನ್ನು ಕಾಣಬಹುದು.

ಗ್ರಾಮೀಣ ಸಂವೇದನೆಗಳನ್ನು ತನ್ನ ಹುಟ್ಟೂರಿನ ಅನುಭವಗಳಿಂದ ಪಡೆದ ಬರಗೂರರು ತಮ್ಮ ಸಾಹಿತ್ಯ ಮತ್ತು ಸಿನಿಮಾಗಳಲ್ಲಿ ಮತ್ತು ಸಾಮಾಜಿಕ ಕಳಕಳಿಯಲ್ಲಿ ಇಂತಹುಗಳನ್ನೇ ಹೆಚ್ಚಾಗಿ ಚಿತ್ರಣಗೊಳಿಸುತ್ತಾರೆ. "ಬರಗೂರರ ಬರವಣಿಗೆಯಲ್ಲಿ ದೇಶೀ ಸಂಸ್ಕೃತಿಯ ಮೂಲವಿದೆ. ಸಂಸ್ಕೃತಿ ಹುಟ್ಟುವುದು ಮೂಲತಃ ಹಳ್ಳಿಗಳಿಂದ. ಅಂತಹ ಹಳ್ಳಿಗಳ ಒಡಲಿನಿಂದ ಮೂಡಿಬಂದ ಸಂಸ್ಕೃತಿಯನ್ನು ತಮ್ಮ ಕಥೆ–ಕಾದಂಬರಿಗಳಲ್ಲಿ ಅನಾವರಣಗೊಳಿಸಿದ್ದಾರೆ. ಇಂದಿನ ವೈಜ್ಞಾನಿಕ ನಾಗರೀಕ ಸಮಾಜಕ್ಕೆ ಸಂಸ್ಕೃತಿ ಅಗತ್ಯತೆಯ ಕುರಿತು ಮುಖ್ಯವಾಗಿ ಮಾತನಾಡುತ್ತಾರೆ. ದೇವನೂರು ಮಹಾದೇವ, ಕುಂವೀಯಂತಹ ಕಥೆಗಾರರು ಗ್ರಾಮ ಬದುಕನ್ನು ತಮ್ಮ ಕಥೆಗಳಲ್ಲಿ ಮೂಡಿಸುವ ರೀತಿ ಬೆರಗು ಹುಟ್ಟಿಸುವಂತಹುದು. ಆದರೆ ಬರಗೂರರು ಗ್ರಾಮ್ಯ ಜೀವನದ ವಿವಿಧ ಮಜಲುಗಳನ್ನು ತೆರೆದಿಟ್ಟರೂ ಹಳ್ಳಿಗಳ ಸಂಸ್ಕೃತಿ ಮತ್ತು ನಗರ ನಾಗರೀಕತೆಯೊಂದಿಗೆ ನಡೆಸುವ ಮುಖಾಮುಖಿ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘರ್ಷಗಳನ್ನು ಎಳೆ–ಎಳೆಯಾಗಿ ಬಿಚ್ಚಿಡುವ ರೀತಿ ಅನನ್ಯವಾದುದು. ಬರಗೂರರು ತಮ್ಮನ್ನು ಕಥೆ–ಕಾವ್ಯ–ಕಾದಂಬರಿಗಳಿಗೆ ಸೀಮಿತಗೊಳಿಸದೆ ನಾಡು–ನುಡಿಗಾಗಿ ಚಿಂತಿಸುವ ಚಿಂತನಶೀಲ ಬರಹಗಾರರಾಗಿದ್ದಾರೆ." ಎಂಬ ಹೆಚ್.ಟಿ. ಪೋತೆಯವರ ಮಾತನ್ನು ಗ್ರಾಮೀಣ ನೆಲೆಯಲ್ಲಿ ಗಮನಿಸುವುದು ಅಗತ್ಯ.

ಪ್ರಸ್ತುತ ಸಂದರ್ಭದಲ್ಲಿ ಜನರನ್ನು ಅತಿ ಶೀಘ್ರವಾಗಿ ತಲುಪುವ ಮಾಧ್ಯಮವೆಂದರೆ ಸಿನಿಮಾ. ಈ ಸಿನಿಮಾ ಮಾಧ್ಯಮದ ಮೂಲಕ ಗ್ರಾಮೀಣ ಪರಿಸರದ ನೋವು ಸಂಕಟಗಳನ್ನು, ಸಂಘರ್ಷಗಳನ್ನು, ತಳಮಳಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ಮೂಲಕ ಉತ್ತಮ ಸಂದೇಶ ಕೊಟ್ಟಿರುವುದನ್ನು ಅವರ ಎಲ್ಲಾ ಸಿನಿಮಾಗಳಲ್ಲಿ ಕಾಣುತ್ತೇವೆ. "ಬರಗೂರರು ಒಬ್ಬ ಸಾಹಿತಿಯಾಗಿ ಎಷ್ಟು ಪ್ರಸಿದ್ದರೋ ಸಿನಿಮಾ ಸಾಹಿತಿಯಾಗಿ, ನಿರ್ದೇಶಕರಾಗಿಯೂ ಅಷ್ಟೇ ಪ್ರಸಿದ್ಧರು. ಅವರು ತಾವು ನಿರ್ಮಿಸಿದ ಎಲ್ಲಾ ಚಲನಚಿತ್ರಗಳಲ್ಲೂ ವಿಭಿನ್ನವಾದ ಪ್ರಯೋಗಗಳನ್ನು ಮಾಡಿದರು. ಸ್ವೀಕರಿಸಿದ ವಸ್ತುವಿನಿಂದ ಹಿಡಿದು, ಅದನ್ನು ನಿರ್ವಹಿಸುವ ಹಂತದವರೆಗೂ ಅವರ ಸಿನಿಮಾಗಳು ಅವರದೇ ಆದ ವಿಶಿಷ್ಟತೆಗಾಗಿ ವಿಶೇಷವಾಗಿ ನಿಲ್ಲುತ್ತವೆ. ಈ ಹಿನ್ನೆಲೆಯಲ್ಲಿ ಭಾರತೀಯ ಚಿತ್ರರಂಗಕ್ಕೆ ಹೊಸತನವನ್ನು ಕೊಟ್ಟ ಸತ್ಯಜಿತ್ ರೇ ರೀತಿಯಲ್ಲಿಯೇ ಕನ್ನಡಕ್ಕೊಬ್ಬ ಸತ್ಯಜಿತ್‌ರೇ ಬರಗೂರರು ಎಂದರೆ ಅತಿಶಯೋಕ್ತಿಯಲ್ಲ" ಎಂಬ ರಾಜಪ್ಪ ದಳವಾಯಿ ಅವರ ಮಾತುಗಳು ಚರ್ಚಾರ್ಹ. ಏಕೆಂದರೆ ಬರಗೂರರ ಸಿನಿಮಾದ ನೆಲೆಗಳು ನಮ್ಮ ಮಾಮೂಲಿ ಸಿನಿಮಾಗಳ ಆಲೋಚನೆಗಿಂತ ಭಿನ್ನವಾಗಿ ನಿಂತಿವೆ. ಇವರ ಚಿತ್ರಗಳ ಮುಖ್ಯವಾದ ಉಸಿರೆ ಸಮಾಜದ ನಾಡಿಗಳನ್ನು ಹಿಡಿದಿಡುವುದು. ಹಳ್ಳಿಯ ಅಸಮಾನತೆಯ ಬದುಕಿನ ಬುಡಕ್ಕೆ ತಮ್ಮ ಚಿಂತನೆಗಳ ಮೂಲಕ ಕೊಡಲಿ ಏಟನ್ನು ಕೊಟ್ಟಿರುವುದು, ಜೊತೆಗೆ ಇಂದಿನ ಸಮಾಜ ಬದಲಾವಣೆಯ ಆಶಯಗಳನ್ನು ತಮ್ಮ ಸಿನಿಮಾಗಳಲ್ಲಿ ವ್ಯಾಖ್ಯಾನಿಸಿರುವುದು ಅವರಲ್ಲಿಯ ಸಾಮಾಜಿಕ ಕಳಕಳಿ ಮತ್ತು ಬದ್ಧತೆಯನ್ನು ಸೂಚಿಸುತ್ತದೆ.

**ಅಡಿ ಟಿಪ್ಪಣಿಗಳು**

---

1 ಅನಂತ ರಂಗಚಾರ್ ಎಸ್ (ಸಂ) ಪಂಪಭಾರತ, ಪುಟ: 221, 1999

2 ಶಿವಾರೆಡ್ಡಿ ಕೆ.ಸಿ. (ಸಂ) ಕುವೆಂಪು ಸಮಗ್ರ ಕಾವ್ಯ, ಸಂಪುಟ–1 ಪುಟ: 667, 2000

3 ಬರಗೂರು ರಾಮಚಂದ್ರಪ್ಪ ಕಾಂಟೆಸ್ಸಾದಲ್ಲಿ ಕಾವ್ಯ, ಪುಟ: 1, 2001

4 ಬರಗೂರು ರಾಮಚಂದ್ರಪ್ಪ ಕಾಂಟೆಸ್ಸಾದಲ್ಲಿ ಕಾವ್ಯ, ಪುಟ: 20, 2001

5 ಬರಗೂರು ರಾಮಚಂದ್ರಪ್ಪ ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಪ್ರಾಸ್ತಾವಿಕ ನುಡಿ, 2001

6 ಬರಗೂರು ರಾಮಚಂದ್ರಪ್ಪ ಸಂಸ್ಕೃತಿ ಉಪ ಸಂಸ್ಕೃತಿ, ಪುಟ: 121, 1994

7 ಬರಗೂರು ರಾಮಚಂದ್ರಪ್ಪ, ಒಂದು ಊರಿನ ಕಥೆಗಳು ಮುನ್ನುಡಿಯಿಂದ, 1999

8 ಬರಗೂರು ರಾಮಚಂದ್ರಪ್ಪ ಸಂಸ್ಕೃತಿ ಉಪ ಸಂಸ್ಕೃತಿ, ಪುಟ: 109–110, 1994

9 ಬರಗೂರು ರಾಮಚಂದ್ರಪ್ಪ ಸಂಸ್ಕೃತಿ ಉಪ ಸಂಸ್ಕೃತಿ, ಪುಟ: 117, 1994